ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ನಿಗಮ ಕಾರ್ಯಾಲಯ,
ಚಾವಿಸನಿನಿ, ಮೈಸೂರು-570017
Telephone No: 0821-2343939
Fax No : 0821-2343939
Company Identity Number[CIN]:- U40109KA2004SGC035177

CHAMUNDESHWARI ELECTRICITY SUPPLY CORPORATION LIMITED
*(A Government of Karnataka Undertaking)*
Corporate Office,
CESC, Mysuru-570017
**Web Site:** www.cescmysore.karnataka.gov.in/
E-mail ID:gmcomm@cescmysore.org
E-mail ID:seccesc@gmail.com

ಕ್ರಮಾಂಕ: ಪ್ರ.ವ್ಯ.(ವಾಣಿಜ್ಯ)/ಉ.ಪ್ರ.ವ್ಯ (ವಾಣಿಜ್ಯ)/ಸ.ಪ್ರ.ವ್ಯ (ವಾಣಿಜ್ಯ)/ಕ-01/20-21/ CYS 1440 ದಿನಾಂಕ: 16 JAN 2021
ಲಗತ್ತು:

## ಸುತ್ತೋಲೆ

**ವಿಷಯ:-ಕ್ಷೇತ್ರ ಮಟ್ಟದಲ್ಲಿ ಗ್ರಾಹಕರಿಗೆ / ನಾಗರೀಕರಿಗೆ ವಿದ್ಯುತ್ ಸೇವೆಗಳ ಅರಿವು ಸಪ್ತಾಹ ಕಾರ್ಯಕ್ರಮ ದಿನಾಂಕ : 03-02-2021 ರಿಂದ 09-02-2021**

★★★★★

ವಿದ್ಯುತ್ ಕ್ಷೇತ್ರದಲ್ಲಿ ನಿಯತ ವಿದ್ಯುತ ಜಾಲದ ತಾಂತ್ರಿಕ ವಿಸ್ತರಣೆ, ಬಲವರ್ಧನೆ ಜೊತೆಗೆ ಗ್ರಾಹಕರುಗಳಿಗೆ ವಿಶ್ವಾಸನೀಯ ಹಾಗೂ ಉತ್ತಮ ಗುಣಮಟ್ಟದ ವಿವಿಧ ತಂತ್ರಜ್ಞಾನ / ತಂತ್ರಾಂಶ ಉಪಯೋಗಿಸಿಕೊಂಡು ವಿದ್ಯುತ್ ಸೇವೆಯನ್ನು ನೀಡಲಾಗುತ್ತಿರುವುದು ನಿಮಗೆಲ್ಲಾ ತಿಳಿದಿರುವ ವಿಷಯವಾಗಿರುತ್ತದೆ. ಮುಂದುವರೆದಂತೆ, ವಿದ್ಯುತ್ ಸರಬರಾಜು ವ್ಯವಸ್ಥೆಯಲ್ಲಿ ವಿದ್ಯುತ್ ವಿತರಣಾ ಜಾಲ ಬಲವರ್ಧನೆ, ವಿಸ್ತರಣೆ ಎಷ್ಟು ಪ್ರಮುಖವೋ ಹಾಗೆಯೇ ಗ್ರಾಹಕರುಗಳ / ನಾಗರೀಕರ ದೂರು, ಕುಂದುಕೊರತೆಗಳನ್ನು ಸ್ವೀಕರಿಸುವ ವ್ಯವಸ್ಥೆ ಹಾಗೂ ನಿವಾರಿಸಲು ಅನುವಾಗುವಂತೆ ಸುಧಾರಿತ ತ್ವರಿತ ಸೇವೆಗಳನ್ನು ತಾಂತ್ರಿಕ ಹಾಗೂ ಲೆಕ್ಕಗಳ ದೈನಂದಿನ ಕಾರ್ಯಚಟುವಟಿಕೆಗಳಲ್ಲಿ ಅಳವಡಿಸಿಕೊಂಡು ನಿಯತ ಕಾಲಮಿತಿಯಲ್ಲಿ ಮಾನ್ಯ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗವು (KERC) ಕಾರ್ಯಾಧಾರಿತ ಗುಣಮಟ್ಟ (Standard of performance) ಕೈಪಿಡಿಗಳಲ್ಲಿ ನಿಗದಿಪಡಿಸಿರುವಂತೆ ನಾಗರೀಕ ಸೇವೆಯನ್ನು ನೀಡಲು ಚಾವಿಸನಿನಿ ಯು ಬದ್ಧವಾಗಿರುತ್ತದೆ ಹಾಗೂ ಎಲ್ಲಾ ಸಕ್ಷಮ ಪ್ರಾಧಿಕಾರಿಗಳು / ಕಛೇರಿಗಳು ಅನುಪಾಲಿಸಬೇಕಾಗಿರುತ್ತದೆ.

ಗ್ರಾಹಕರಿಗೆ ವಿದ್ಯುತ್ ಕ್ಷೇತ್ರದಲ್ಲಿ ಆಗಿರುವ ಗಣನೀಯ ಬದಲಾವಣೆಗಳು ತಂತ್ರಾಂಶ ಆಧಾರಿತ, ಸುಧಾರಿತ ಸೇವೆಗಳ ಉತ್ಕೃಷ್ಠ ಉಪಯೋಗಗಳ ಅರಿವು, ಹಾಗೂ ಬಳಕೆ ಹೆಚ್ಚಿನ ಮಟ್ಟದ ಸಮರ್ಪಕ ಸೇವೆಗೆ ಅನುವು ಮಾಡುವ ನಿಟ್ಟಿನಲ್ಲಿ ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಚಾವಿಸನಿನಿ ರವರ ನಿರ್ದೇಶನಗಳಂತೆ, **ಕಾರ್ಯ ಮತ್ತು ಪಾಲನಾ ಕ್ಷೇತ್ರ/ ಘಟಕ ಮಟ್ಟದಲ್ಲಿ, ಆಯಾ ವ್ಯಾಪ್ತಿಯ ಗ್ರಾಹಕರ / ನಾಗರೀಕರಿಗೆ ವಿದ್ಯುತ್ ಸೇವೆಯಲ್ಲಿ ಅರಿವು ಮೂಡಿಸುವ ಸಾಪ್ತಾಹಿಕ ಕಾರ್ಯಕ್ರಮವನ್ನು ದಿನಾಂಕ : 03-02-2021 ರಿಂದ 09-02-2021 ರ ಅವಧಿಯಲ್ಲಿ ಪ್ರತಿ ಶಾಖಾ ಕಛೇರಿ ಮಟ್ಟದಲ್ಲಿ ಅರಿವು ಕಾರ್ಯಕ್ರಮ ಆಯೋಜಿಸುವುದು.**

ನಿಗಮವು ಈಗಾಗಲೇ ಗ್ರಾಹಕರ ಹಿತ ರಕ್ಷಣೆ, ಸುರಕ್ಷತೆ, ಹಲವಾರು ಗ್ರಾಹಕಸ್ನೇಹಿ ಸೇವಾ ಕಾರ್ಯಕ್ರಮಗಳನ್ನು ನಡೆಸಲಾಗುತ್ತಿರುವ ವಿಷಯಗಳನ್ನೊಳಗೊಂಡಂತೆ ಕೆಳಕಂಡ ಮಾಹಿತಿಗಳನ್ನು ಸಹ ಅರಿವು ಕಾರ್ಯಕ್ರಮದಲ್ಲಿ ಅಡಕಗೊಳಿಸುವುದು ಹಾಗೂ ನಿರ್ವಹಿಸುವುದು.

1. ಚಾ.ವಿ.ಸ.ನಿ.ನಿ ವ್ಯಾಪ್ತಿಯಲ್ಲಿ ಅಧಿಕಾರಿಗಳು/ ಸಿಬ್ಬಂದಿಗಳು ನೇರವಾಗಿ ಗ್ರಾಹಕರ ತೃಪ್ತಿಕರ ಸೇವೆಗಾಗಿ ಸಂವಹನ ಕೌಶಲ್ಯದ ಬಗ್ಗೆ ಉತ್ತಮ ಬಾಂದವ್ಯವನ್ನು ರೂಪಿಸುವುದು.
2. ಸ್ಥಳೀಯ ಮಟ್ಟದಲ್ಲಿ ಜನಸಂಪರ್ಕ ಸಭೆಗಳನ್ನು ಅಧೀಕ್ಷಕ ಇಂಜಿನಿಯರ್(ವಿ) / ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರ ಅಧ್ಯಕ್ಷತೆಯಲ್ಲಿ 3 ತಿಂಗಳಿಗೊಮ್ಮೆ ಸಭೆಗಳ ಮುಖೇನ ಗ್ರಾಹಕರ ದೂರು / ಕುಂದುಕೊರತೆಗಳನ್ನು ಸ್ವೀಕರಿಸುವುದು ಹಾಗೂ ತೃಪ್ತಿಕರ ಪರಿಹಾರ ಒದಗಿಸುವುದು ಹಾಗೂ ಪ್ರತಿ ಮಾಹೆ 3 ನೇ ಶನಿವಾರದಂದು ಗ್ರಾಹಕರ ಸಂವಾದ ಸಂಪರ್ಕ ಸಭೆಗಳನ್ನು ಎಲ್ಲಾ ಕಾರ್ಯ ಮತ್ತು ಪಾಲನಾ ಉಪ ವಿಭಾಗಗಳಲ್ಲಿ ಏರ್ಪಡಿಸುವುದು.

-2-

3. ಗ್ರಾಹಕರಿಂಧ ಸ್ವೀಕೃತ ದೂರುಗಳು ಹಾಗೂ ಕುಂದುಕೊರತೆಗಳನ್ನು ಪರಿಹರಿಸುತ್ತಿರುವ ವಿಷಯದ ಬಗ್ಗೆ ಅರಿವು ಮೂಡಿಸುವುದು.
4. ನಿಗಮ ವ್ಯಾಪ್ತಿಯಲ್ಲಿ ನಿಯತಕಾಲಿಕವಾಗಿ ನಿರ್ವಹಿಸುತ್ತಿರುವ ವಿವಿಧ ಅಭಿವೃದ್ಧಿ ಕಾರ್ಯ-ಕ್ರಮಗಳ ಹಾಗೂ ಯೋಜನೆಗಳ ವಿಷಯಗಳು ಹಾಗೂ ಅದರ ಉಪಯೋಗಗಳ ಬಗ್ಗೆ ಅರಿವು ಮೂಡಿಸುವುದು.
5. ಗ್ರಾಹಕರ ಕುಂದುಕೊರತೆ ನಿವಾರಣಾ ವೇದಿಕೆಯಲ್ಲಿ (CGRF) ಗ್ರಾಹಕರ ಕುಂದುಕೊರತೆಗಳನ್ನು ನಿವಾರಣಾ ವೇದಿಕೆಯನ್ನೊಳಗೊಂಡಂತೆ ವಿವಿಧ ಕುಂದುಕೊರತೆಗಳು ಹಾಗೂ ವಿಧಾನಗಳ ಬಗ್ಗೆ ಅರಿವು ಮೂಡಿಸುವುದು.
6. ನಿಗಮದ ವ್ಯಾಪ್ತಿಯಲ್ಲಿ ವಿದ್ಯುತ್ ಜಾಲವನ್ನು ಸಧೃಡಗೊಳಿಸುವ ನಿಟ್ಟಿನಲ್ಲಿ ಇತ್ತೀಚಿನ ವರ್ಷಗಳಲ್ಲಿ ಕೇಂದ್ರ / ರಾಜ್ಯ ಪುರಸ್ಕೃತ ಯೋಜನೆಗಳಾದ ನಿರಂತರ ಜ್ಯೋತಿ ಯೋಜನೆ, RAPDRP, ದಿನದಯಾಳು ಉಪಾಧ್ಯಾಯ (DDUGJY) ಗ್ರಾಮ ಜ್ಯೋತಿ, ಡಿಸೆಂಟ್ರಲೈಜ್ಡ್ ಡಿಸ್ಟ್ರಿಬ್ಯುಟೆಡ್ ಜನರೇಷನ್ (ಡಿ.ಡಿ.ಜಿ), ಸಮಗ್ರ ವಿದ್ಯುತ್ ಅಭಿವೃದ್ಧಿ ಯೋಜನೆ (IPDS), ಯೋಜನೆಯಲ್ಲಿ ವಿದ್ಯುದ್ಧೀಕರಣಕ್ಕಾಗಿ ಯೋಜನೆಗಳನ್ನು ಅನುಷ್ಠಾನಗೊಳಿಸಿರುವ ಧ್ಯೇಯೋದ್ದೇಶಗಳ ಬಗ್ಗೆ ಗ್ರಾಹಕರಿಗೆ / ನಾಗರೀಕರಿಗೆ ಆಗುವ ಅನುಕೂಲದ ಬಗ್ಗೆ ಅರಿವು ಮೂಡಿಸುವುದು.
7. ಗ್ರಾಹಕರ ಸೇವೆಗಳನ್ನು ಉತ್ತಮ ಗೊಳಿಸುವ ಸಲುವಾಗಿ ಹಾಗೂ ನೌಕರರ ವ್ಯಕ್ತಿತ್ವ ವಿಕಸನ ಕಾರ್ಯಕ್ರಮಗಳ ತರಬೇತಿಯ ಬಗ್ಗೆ ಅರಿವು ಮೂಡಿಸುವುದು.
8. ಚಾ.ವಿ.ಸ.ನಿ.ನಿಯು ಗ್ರಾಹಕರ ಕುಂದುಕೊರತೆ ನಿವಾರಣೆ ದೃಷ್ಠಿಯಲ್ಲಿ ಹಾಗೂ ಉತ್ತಮ ಗುಣಮಟ್ಟದ ಪರಿಣಾಮಕಾರಿಯಾದ ಸೇವೆಗಳನ್ನು ಒದಗಿಸಲು ಆಧುನಿಕ ತಂತ್ರಾಂಶಗಳನ್ನೊಳಗೊಂಡ ನೂತನ ಸೇವಾ ವ್ಯವಸ್ಥೆ URJA MITRA, DTLMS, FAMS, MMS, HRMS ಗಳ ಬಗ್ಗೆ ಅರಿವು ಮೂಡಿಸುವುದು.
9. ಗ್ರಾಹಕರ ದೂರುಗಳನ್ನು ಸ್ವೀಕರಿಸಿ, ನಿವಾರಿಸುವ ನಿಟ್ಟಿನಲ್ಲಿ 24X7 ಸೇವಾ ಕೇಂದ್ರ ಹಾಗೂ ಚಾವಿಸನಿನಿ ವ್ಯಾಪ್ತಿಯ ಎಲ್ಲಾ ಜಿಲ್ಲಾಗಳ ಗ್ರಾಹಕರ / ನಾಗರೀಕರ ಅನುಕೂಲಕ್ಕೆ ಶುಲ್ಕ ರಹಿತ ದೂರವಾಣಿಗಳನ್ನೊಳಗೊಂಡ ಕೇಂದ್ರ ಗ್ರಾಹಕರ ದೂರು ವಿಭಾಗಳನ್ನು (CCCD) ಸ್ಥಾಪಿಸಿರುವ ಬಗ್ಗೆ ಹಾಗೂ 1912 ಶುಲ್ಕರಹಿತ ದೂರವಾಣಿ ಸಂಖ್ಯೆಗೆ ಕರೆ ಮಾಡುವಂತೆ ಅರಿವು ಮೂಡಿಸುವುದು.
10. ಚಾ.ವಿ.ಸ.ನಿ.ನಿ ವ್ಯಾಪ್ತಿಯಲ್ಲಿ ಗ್ರಾಹಕರ ಅನುಕೂಲಕ್ಕಾಗಿ ವಿವಿಧ ತಂತ್ರಾಂಶಾಧಾರಿತ ಸೇವೆಗಳಾದ ಆನ್-ಲೈನ್ ವಿದ್ಯುತ್ ಬಿಲ್ ಪಾವತಿಸುವುದು, ತ್ವರಿತ ದೂರು ನೊಂದಣಿ ಮಾಡುವುದು. ಕರ್ನಾಟಕ ಮೊಬೈಲ್ ಒನ್, ಎಲ್ಲಾ ಬ್ಯಾಂಕ್ ಗಳ ಆನ್-ಲೈನ್ ಮತ್ತು ನೆಟ್ ಬ್ಯಾಂಕಿಂಗ್, ವಿವಿಧ ವ್ಯಾಲೆಟ್ ಸೇವೆಗಳ ಮುಖಾಂತರ ಸುಲಲಿತವಾಗಿ ಗ್ರಾಹಕರಿಗೆ ಬಿಲ್ಲಿನ ಹಣವನ್ನು ಪಾವತಿಸಲು ವ್ಯವಸ್ಥೆ ಮಾಡಿರುವ ಬಗ್ಗೆ ಹಾಗೂ ಅಂತರ್ಜಾಲದಲ್ಲಿ ಅಡಕವಾಗಿರುವ ವಿವರಗಳನ್ನು ಹೆಚ್ಚಿನ ಬಳಕೆ ಮಾಡಲು ಅರಿವು ಮೂಡಿಸುವುದು.
11. ಗ್ರಾಮೀಣ ಪ್ರದೇಶಗಳಲ್ಲಿನ ಕೃಷಿ ಬಳಕೆಯ ನೀರಾವರಿ ಪಂಪುಸೆಟ್ಟುಗಳ (IP set) ಸ್ಥಾವರಗಳನ್ನು ಪ್ರತ್ಯೇಕಿಸಿ ಗ್ರಾಮೀಣ ಪ್ರದೇಶಗಳ ವಿದ್ಯುತ್ ಸೇವೆಯಲ್ಲಿ ಉಳಿದ ಎಲ್ಲಾ ಜಕಾತಿ ವರ್ಗಗಳ ಉಪಯೋಗಕ್ಕಾಗಿ ನಿರಂತರ ವಿದ್ಯುತ್ ಸಂಪರ್ಕ ಕಲ್ಪಿಸಿರುವ ಬಗ್ಗೆ ನಿರಂತರ ಜ್ಯೋತಿ ಯೋಜನೆ (NJY) ಯ ಪ್ರಮುಖ ಉದ್ದೇಶವಾಗಿದ್ದು ಈ ಯೋಜನೆಯನ್ನು ಈಗಾಗಲೇ ಅನುಷ್ಠಾನಗೊಳಿಸಲಾಗಿರುತ್ತದೆ ಎಂದು ಅರಿವು ಮೂಡಿಸುವುದು.
12. ಗ್ರಾಮೀಣ ಪ್ರದೇಶಗಳಲ್ಲಿನ ಕೃಷಿ ಬಳಕೆಯ ಬಹುತೇಕ ನೀರಾವರಿ ಪಂಪುಸೆಟ್ಟುಗಳ ಸ್ಥಾವರಗಳಿಗೆ ನಿರ್ಧಾರಿತ ಸಮಯದಲ್ಲಿ ಹಗಲಿನ ವೇಳೆಯಲ್ಲಿ 7 ಗಂಟೆಗಳ ಗುಣಮಟ್ಟದ ವಿದ್ಯುತ್ ಸರಬರಾಜು
13. ನೀಡುತ್ತಿರುವ ಬಗ್ಗೆ ಅರಿವು ಮೂಡಿಸುವುದು. 7 ಗಂಟೆಗಳ ಅವಧಿ ನೀಡದೆ ಇದ್ದ ಪಕ್ಷದಲ್ಲಿ ತಾಂತ್ರಿಕ ತೊಂದರೆಗಳನ್ನು ತಿಳಿಸಿ, ಈ ನಿಟ್ಟಿನಲ್ಲಿ ಕೈಗೊಂಡಿರುವ ಕ್ರಮಗಳನ್ನು ಸಹ ವಿವರಿಸುವುದು.

14. ಹೊಸ ಬೆಳಕು ಯೋಜನೆಯಡಿ ವಿತರಿಸುತ್ತಿರುವ ಎಲ್.ಇ.ಡಿ. ಬಲ್ಬುಗಳು ಹಾಗೂ ಟ್ಯೂಬ್ ಲೈಟುಗಳ ಲೈಟ್‌ಗಳ ಬಳಕೆಯಿಂದ ಗ್ರಾಹಕರಿಗೆ ಮಹತ್ವವಾದ ವಿದ್ಯುತ್ ಉಳಿತಾಯಕ್ಕೆ ಅನುಕೂಲವಾಗಿರುವ ಬಗ್ಗೆ ಅರಿವು ಮೂಡಿಸುವುದು.
15. ಗ್ರಾಹಕರಲ್ಲಿ ಸುರಕ್ಷತೆಯ ಬಗ್ಗೆ ಹಾಗೂ ವಿದ್ಯುತ್ ಉಳಿತಾಯದ ಅರಿವನ್ನು ಮೂಡಿಸಲು ಪತ್ರಿಕೆ / ಕರ ಪತ್ರ ಮತ್ತು ವಿದ್ಯುನ್ಮಾನ ಮಾಧ್ಯಮಗಳ ಮೂಲಕ ಕ್ರಮಕೈಗೊಳ್ಳಲಾಗಿರುವ ಬಗ್ಗೆ ಹಾಗೂ ಸುರಕ್ಷತೆಯ ಬಗ್ಗೆ ಜಾಗೃತಿ ಮೂಡಿಸಲು ಜನ ಜಾಗೃತಿ ಜಾಥಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿರುವ ಬಗ್ಗೆ ಅರಿವು ಮೂಡಿಸುವುದು.
16. ವಿದ್ಯುತ್ ಅವಘಡಗಳು / ಅಪಘಾತಗಳನ್ನು ತಡೆಗಟ್ಟಲು ವಿದ್ಯುತ್ ಸುರಕ್ಷತಾ ಕ್ರಮಗಳ ಬಗ್ಗೆ ನಿಗಮವು ಕೈಗೊಂಡಿರುವ ಕಾರ್ಯಕ್ರಮಗಳು, ಸಾರ್ವಜನಿಕರು / ಗ್ರಾಹಕರಿಗೆ ಹಾಗೂ ಸಿಬ್ಬಂಧಿಗಳಿಗೆ ತಿಳುವಳಿಕೆ ಮೂಡಿಸಲು ಚಾ.ವಿ.ಸ.ನಿ.ನಿ. ವತಿಯಿಂದ ಕೈಗೊಂಡಿರುವ ಕ್ರಮಗಳ ಬಗ್ಗೆ ಅರಿವು ಮೂಡಿಸುವುದು.
17. ಚಾ.ವಿ.ಸ.ನಿ.ನಿ. ಅಂತರ್ಜಾಲ (ವೆಬ್ ಸೈಟ್)ನ್ನು ಸಾರ್ವಜನಿಕರ ಮಾಹಿತಿಗಾಗಿ ತೆರೆಯಲಾಗಿದೆ. (www.cescmysore.karnataka.gov.in/). ಇದರ ಬಗ್ಗೆ ಅರಿವು ಮೂಡಿಸುವುದು.
18. ಸೌಜನ್ಯ ಕೌಂಟರ್‌ಗಳು ಹಾಗೂ ಸಕಾಲ (Sakala Services) ಸೇವಾ ಕೌಂಟರ್ ಗಳಲ್ಲಿ ನೀಡಲಾಗುವ ಸೇವೆಗಳ ಸದುಪಯೋಗದ ಬಗ್ಗೆ ಸಾರ್ವಜನಿಕರಿಗೆ / ನಾಗರೀಕರಿಗೆ ಅರಿವು ಮೂಡಿಸುವುದು.
19. ಆನೆ ಕಾರಿಡಾರ್‌ಗಳಲ್ಲಿ ವಿದ್ಯುತ್ ಮಾರ್ಗಗಳ ಬಗ್ಗೆ ಹಾಗೂ ಸಂರಕ್ಷಿತ ವನ್ಯಜೀವಿಗಳ ಹಾದು ಮಾರ್ಗಗಳಲ್ಲಿ ತೆಗೆದುಕೊಂಡಿರುವ ಸುರಕ್ಷತಾ ಕ್ರಮಗಳ ಬಗ್ಗೆ ಹಾಗೂ ಬಾಗಿರುವ ಮತ್ತು ಶಿಥಿಲಗೊಂಡಿರುವ ಕಂಬಗಳು ಹಾಗೂ ತುಂಡಾಗಿರುವ ವಿದ್ಯುತ್ ತಂತಿಗಳು ಸಾರ್ವಜನಿಕರ ಗಮನಕ್ಕೆ ಬಂದಲ್ಲಿ ಶೀಘ್ರವಾಗಿ ಸಂಬಂಧಿಸಿದ ಕಛೇರಿಗಳಿಗೆ ವಿಷಯ ತಲುಪಿಸುವಂತೆ ಕಾಡಂಚಿನ ಪ್ರದೇಶಗಳ ಸಾರ್ವಜನಿಕರಿಗೆ / ನಾಗರೀಕರಿಗೆ ಅರಿವು ಮೂಡಿಸುವುದು.
20. ಮಾನ್ಯ ವ್ಯವಸ್ಥಾಪಕ ನಿರ್ದೇಶಕರ ನಿರ್ದೇಶನಗಳಂತೆ, ಆಗಸ್ಟ್-2020 ರಿಂದ ಪ್ರತಿ ಶಾಖಾ ವ್ಯಾಪ್ತಿಯಲ್ಲಿ ಕನಿಷ್ಠ 5 ಅಪಾಯಕಾರಿ ಸ್ಥಳಗಳನ್ನು ಗುರುತಿಸಿ ಅವುಗಳನ್ನು ಸರಿಪಡಿಸಿ, ಮೊದಲು ಮತ್ತು ನಂತರ ಆಗಿರುವ ಬದಲಾವಣೆಗಳ ಬಗ್ಗೆ ಛಾಯಾಚಿತ್ರಗಳ ಸಹಿತ ಅರಿವು ಮೂಡಿಸುವುದು ಹಾಗೂ ಇದರ ಬಗ್ಗೆ ನಿಗಮದ ಅಂತರ್ಜಾಲ (ವೆಬ್-ಸೈಟ್) ನಲ್ಲಿ ಪ್ರಕಟಿಸಿರುವ ಬಗ್ಗೆ ಹಾಗೂ ಇದರಿಂದ ಸಾರ್ವಜನಿಕರಿಗೆ / ನಾಗರೀಕರಿಗೆ ಆಗಿರುವ ಸುರಕ್ಷತಾ ಅನುಕೂಲಗಳ ಬಗ್ಗೆ ಅರಿವು ಮೂಡಿಸುವುದು.
21. ಮಾನ್ಯ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗವು ನಿರ್ದೇಶಿಸಿರುವಂತೆ ಚಾವಿಸನಿನಿ ವ್ಯಾಪ್ತಿಯ ಎಲ್ಲಾ ಕಛೇರಿಗಳಲ್ಲಿ Standard of Performance (Sop) ಫಲಕಗಳನ್ನು ಅಳವಡಿಸಲಾಗಿರುವ ಬಗ್ಗೆ ಸಾರ್ವಜನಿಕರಿಗೆ / ನಾಗರೀಕರಿಗೆ ನೀಡುತ್ತಿರುವ ಸೇವೆಯ ಬಗ್ಗೆ ಅರಿವು ಮೂಡಿಸುವುದು.

**ಅರಿವು ಕಾರ್ಯಕ್ರಮ ನಡೆಸಲು ತೆಗೆದುಕೊಳ್ಳಬೇಕಾದ ಕ್ರಮಗಳು :**

ಕ್ಷೇತ್ರ ಮಟ್ಟದ ಅರಿವು ಕಾರ್ಯಕ್ರಮಗಳಿಗೆ ವಿಭಾಗದ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಗಳು ನೋಡಲ್ ಅಧಿಕಾರಿಗಳಾಗಿರುತ್ತಾರೆ.

ವಿಭಾಗಾಧಿಕಾರಿಗಳು ಎಲ್ಲಾ ಉಪವಿಭಾಗಗಳ ವ್ಯಾಪ್ತಿಯ ಶಾಖೆಗಳ ಕಾರ್ಯಕ್ರಮಗಳ ಪಟ್ಟಿ ಮಾಡಿ ದಿನಾಂಕಗಳನ್ನು ನಿಗದಿಪಡಿಸಿ ಸುಲಲಿತ ಕಾರ್ಯಕ್ರಮ ಏರ್ಪಡಿಸುವುದು.

ಕ್ಷೇತ್ರ ಕಛೇರಿಯಲ್ಲಿ ಅರಿವು ಕಾರ್ಯಕ್ರಮದ ಬಗ್ಗೆ ದಿನಾಂಕ ನಿಗದಿ ಪಡಿಸಿ, ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ಸ್ಥಳೀಯ ಮಟ್ಟದಲ್ಲಿ ಪತ್ರಿಕಾ ಪ್ರಕಟಣೆ ಹಾಗೂ ಕರಪತ್ರ ಮುಖೇನ ತಿಳಿಯಪಡಿಸುವುದು.

ಮೇಲೆ ಸೂಚಿಸಿರುವ 21 ಅಂಶಗಳನ್ನೊಳಗೊಂಡಂತೆ ಗ್ರಾಹಕರಿಗೆ / ನಾಗರೀಕರಿಗೆ ನಿಗಮದ ಇತರ ಕಾರ್ಯಚಟುವಟಿಕೆಗಳ ಬಗ್ಗೆ ಅರಿವು ಮೂಡಿಸುವುದು.

ಪ್ರತಿ ಶಾಖೆಗೆ ರೂ. 5000/-(ಐದು ಸಾವಿರಗಳು ಮಾತ್ರ) ಗಳಿಗೆ ಮೀರದಂತೆ ಖರ್ಚಿನಲ್ಲಿ ನಿಯಮಾನುಸಾರ ನಿರ್ವಹಿಸುವುದು.

ಉಪವಿಭಾಗದ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ತಮ್ಮ ಶಾಖಾ ವ್ಯಾಪ್ತಿಯ ಎಲ್ಲಾ ಕಾರ್ಯಕ್ರಮಗಳಲ್ಲಿ ಹಾಜರಿದ್ದು ಅರಿವು ಕಾರ್ಯಕ್ರಮ ನಿರ್ವಹಿಸುವುದು.

ಪ್ರತಿ ಶಾಖೆಯ ಅರಿವು ಕಾರ್ಯಕ್ರಮದ ಛಾಯಾಚಿತ್ರಗಳ ಸಹಿತ ಸಮುಚಿತ ಮಾರ್ಗಮುಖೇನ ಅನುಸರಣಾ ವರದಿಯನ್ನು ನಿಗಮ ಕಛೇರಿಗೆ ಸಲ್ಲಿಸುವುದು.

ಕಾರ್ಯನಿರ್ವಾಹಕ ಇಂಜಿನಿಯರ್(ವಿ), ವಿಭಾಗ ರವರು ಎಲ್ಲಾ ಉಪವಿಭಾಗದ ಕನಿಷ್ಠ ಎರಡು ಶಾಖೆಯ ಕಾರ್ಯಕ್ರಮದಲ್ಲಿ ಹಾಜರಿರುವುದು.

ಅಧೀಕ್ಷಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನಾ ವೃತ್ತ ರವರು ತಮ್ಮ ಅಧೀನ ಕಛೇರಿಯ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದು.

ಮುಖ್ಯ ಇಂಜಿನಿಯರ್(ವಿ)ಕಾರ್ಯ ಮತ್ತು ಪಾಲನಾ ವಲಯ ರವರು ತಮ್ಮ ಅಧೀನ ಕಛೇರಿಯ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದು.

**Novel Covid-2019 ಸಾಂಕ್ರಾಮಿಕ ವೈರಾಣುಗಳು ಹರಡದಂತೆ ಕೇಂದ್ರ ಮತ್ತು ರಾಜ್ಯ ಸರ್ಕಾರದ ಹಾಗೂ ಸ್ಥಳೀಯ ಜಿಲ್ಲಾಡಳಿತದ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಅನುಪಾಲನೆ ಮಾಡುವುದು. ಮುಖ್ಯವಾಗಿ ಸಾಮಾಜಿಕ ಅಂತರ ಕಾಪಾಡುವುದು, ಮಾಸ್ಕ್ ಧರಿಸುವುದು ಹಾಗೂ ನಿಯತ ಸ್ಯಾನಿಟೈಜರ್ ಬಳಸುವುದು.**

16/01/2021

| |
|---|
| ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ರವರಿಂದ ಅನುಮೋದಿಸಲ್ಪಟ್ಟಿದೆ. |

**ಪ್ರಧಾನ ವ್ಯವಸ್ಥಾಪಕರು (ವಾಣಿಜ್ಯ),**
**ಚಾ.ವಿ.ಸ.ನಿ.ನಿ, ಮೈಸೂರು.**

ಪ್ರತಿಗಳು :-

1. ಹಿರಿಯ ಆಪ್ತ ಕಾರ್ಯದರ್ಶಿ, ಮಾನ್ಯ ಅಪರ ಮುಖ್ಯ ಕಾರ್ಯದರ್ಶಿಗಳು, ಇಂದನ ಇಲಾಖೆ, ಕರ್ನಾಟಕ ಸರ್ಕಾರದ ಸಚಿವಾಲಯ, ವಿಕಾಸಸೌಧ, ಬೆಂಗಳೂರು ಆದ್ಯ ಗಮನಕ್ಕೆ.
2. ಸರ್ಕಾರದ ಅಧೀನ ಕಾರ್ಯದರ್ಶಿ, ಇಂಧನ ಇಲಾಖೆ, ಕರ್ನಾಟಕ ಸರ್ಕಾರದ ಸಚಿವಾಲಯ, 2ನೇ ಮಹಡಿ, ವಿಕಾಸ ಸೌಧ, ಡಾ॥ ಅಂಬೇಡ್ಕರ್ ವೀದಿ, ಬೆಂಗಳೂರು-560001.
3. ಕಾರ್ಯದರ್ಶಿ ರವರು, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ, ನಂ. 16/ಸಿ-1, ಮಿಲ್ಲರ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ, ಬೆಂಗಳೂರು ರವರ ಮಾಹಿತಿಗಾಗಿ ಹಾಗೂ ಮಾನ್ಯ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ ರವರ ಆದ್ಯ ಗಮನಕ್ಕೆ ತರುವುದು.
4. ಮುಖ್ಯ ಆರ್ಥಿಕ ಅಧಿಕಾರಿ, ನಿಗಮ ಕಛೇರಿ, ಚಾವಿಸನಿನಿ, ಮೈಸೂರು.
5. ಮುಖ್ಯ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನಾ ವಲಯ, ಚಾವಿಸನಿನಿ, ಮೈಸೂರು / ಹಾಸನ ರವರ ಮುಂದಿನ ಸೂಕ್ತ ಕ್ರಮಕ್ಕಾಗಿ.
6. ಮುಖ್ಯ ಪ್ರಧಾನ ವ್ಯವಸ್ಥಾಪಕರು, ಆಂತರಿಕ ಪರಿಶೋಧನೆ, ನಿಗಮ ಕಛೇರಿ, ಚಾವಿಸನಿನಿ, ಮೈಸೂರು
7. ಅಧೀಕ್ಷಕ ಇಂಜನಿಯರ್(ವಿ), ಕಾರ್ಯ ಮತ್ತು ಪಾಲನಾ ವೃತ್ತ, ಚಾವಿಸನಿನಿ, ಮೈಸೂರು / ಚಾಮರಾಜನಗರ-ಕೊಡಗು / ಮಂಡ್ಯ / ಹಾಸನ ರವರ ಮಾಹಿತಿಗಾಗಿ ಮತ್ತು ಸೂಕ್ತ-ಕ್ರಮಕ್ಕಾಗಿ.
8. ಪ್ರಧಾನ ವ್ಯವಸ್ಥಾಪಕರು, ವಾಣಿಜ್ಯ / ತಾಂತ್ರಿಕ / ಯೋಜನೆ / ಖರೀದಿ / ಆ ಮತ್ತು ಮಾ.ಸಂ / ಲೆ ಮತ್ತು ಕಂ, ನಿಗಮ ಕಛೇರಿ, ಚಾವಿಸನಿನಿ, ಮೈಸೂರು ರವರ ಮಾಹಿತಿಗಾಗಿ ಮತ್ತು ಸೂಕ್ತ ಕ್ರಮಕ್ಕಾಗಿ.
9. ಲೆಕ್ಕಾ ನಿಯಂತ್ರಣಾಧಿಕಾರಿಗಳು, ಕಾರ್ಯ ಮತ್ತು ಪಾಲನಾ ವಲಯ, ಮೈಸೂರು / ಹಾಸನ
10. ಎಲ್ಲಾ ಕಾರ್ಯನಿರ್ವಾಹಕ ಇನಿಯರ್(ವಿ), ಕಾರ್ಯ ಮತ್ತು ಪಾಲನಾ ವಿಭಾಗ, ಚಾವಿಸನಿನಿ ರವರ ಮಾಹಿತಿಗಾಗಿ ಮುಂದಿನ ಸೂಕ್ತ ಕ್ರಮಕ್ಕಾಗಿ.

11. ಉಪ ಪ್ರಧಾನ ವ್ಯವಸ್ಥಾಪಕರು, ಎಂಐಎಸ್, ನಿಗಮ ಕಛೇರಿ, ಚಾವಿಸನಿನಿ, ಮೈಸೂರು ರವರು ನಿಗಮದ ಜಾಲತಾಣಗಳಲ್ಲಿ ಪ್ರಕಟಿಸಲು.
12. ಕಂಪನಿ ಕಾರ್ಯದರ್ಶಿ, ನಿಗಮ ಕಛೇರಿ, ಚಾವಿಸನಿನಿ, ಮೈಸೂರು.
13. ಉಪ ಲೆಕ್ಕಾ ನಿಯಂತ್ರಣಾಧಿಕಾರಿಗಳು, ಕಾರ್ಯ ಮತ್ತು ಪಾಲನಾ ವೃತ್ತ, ಮೈಸೂರು / ಚಾಮರಾಜನಗರ-ಕೊಡಗು / ಮಂಡ್ಯ / ಹಾಸನ, ಚಾವಿಸನಿನಿ.
14. ಎಲ್ಲಾ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನಾ ಉಪವಿಭಾಗ, ಚಾವಿಸನಿನಿ ರವರ ಸೂಕ್ತ ಕ್ರಮಕ್ಕಾಗಿ ಮತ್ತು ತಮ್ಮ ಕಾರ್ಯ ವ್ಯಾಪ್ತಿಯ ಶಾಖಾಧಿಕಾರಿಗಳಿಗೆ ಸುತ್ತೋಲೆಯ ಪ್ರತಿಯೊಂದಿಗೆ ಸೂಕ್ತ ನಿರ್ದೇಶನಗಳನ್ನು ನೀಡುವುದು ಹಾಗೂ ಅನುಪಾಲಿಸುವುದು.
15. ಎಲ್ಲಾ ಲೆಕ್ಕಾಧಿಕಾರಿಗಳು, ಕಾ ಮತ್ತು ಪಾ ವಿಭಾಗ, ಚಾವಿಸನಿನಿ.
16. ಎಲ್ಲಾ ಲೆಕ್ಕಾಧಿಕಾರಿಗಳು, ಆಂತರಿಕ ಪರಿಶೋಧನೆ, ಚಾವಿಸನಿನಿ.
17. ಆಪ್ತ ಸಹಾಯಕರು, ವ್ಯವಸ್ಥಾಪಕ ನಿರ್ದೇಶಕರು ಇದನ್ನು ವ್ಯವಸ್ಥಾಪಕ ನಿರ್ದೇಶಕರು ರವರ ದಯಾಪರ ಗಮನಕ್ಕೆ ತರಲು ಕೋರಲಾಗಿದೆ.
18. ತಾಂತ್ರಿಕ ಸಹಾಯಕರು, ಚಾವಿಸನಿನಿ ಇವರಿಗೆ ರವಾನಿಸುತ್ತಾ ಮಾನ್ಯ ನಿರ್ದೇಶಕರು(ತಾಂತ್ರಿಕ) ರವರ ಅವಗಾಹನೆಗೆ ತರಲು ಕೋರಲಾಗಿರುತ್ತದೆ.
19. ಉ.ಪ್ರ.ವ್ಯ.(ವಾಣಿಜ್ಯ)/ಸ.ಪ್ರ.ವ್ಯ.(ವಾಣಿಜ್ಯ).
    ಮು ಕ/ಕ ಪ್ರ